**ಎಮ್ ವಿ ಸಿ ನಂಃ 1223/2023**
**ಆರ್.ಡಬ್ಲ್ಯೂಃ 1,**

**ಸಾಕ್ಷಿಯನ್ನು ದಿನಾಂಕ : 23-01-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :- ಶ್ರೀ. ಎ.ಎಮ್. ವಾಯ. ಎದುರುದಾರ ಪರ ವಕೀಲರಿಂದ:**

ಸಾಕ್ಷಿದಾರನು ತನ್ನ ಸಾಕ್ಷಿ ಪ್ರಮಾಣ ಪತ್ರ ಹಾಜರುಪಡಿಸಿದ್ದು ಹಾಗೂ ಅದರಲ್ಲಿ ಇರುವ ತನ್ನ ಸಹಿಯನ್ನು ಗುರುತಿಸಿರುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ವಿಷಯಗಳು ನಿಜ ಇರುತ್ತವೆ.

ಸಾಕ್ಷಿಯು ಈ ದಿನ ಹಾಜರು ಪಡಿಸಿರುವ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು.

ನಿಆರ್. -1- ಪಾಲಸಿ ಕಾಫಿ ನಕಲು

**ಪಾಟಿ ಸವಾಲು: ಶ್ರೀ. ವಿ.ಎಸ್. ಆರ್. ಅರ್ಜಿದಾರ ಪರ ವಕೀಲರಿಂದ :**

ನಾನು ಅಂತಿಮ ವರದಿ ಪ್ರಕಾರ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ. ಅಂತಿಮ ವರದಿ ಪ್ರಕಾರ ವಿಮೆ ಹೊಂದಿದ ಕೆ.ಎ.-32-ಇಡಿ-1617 ಮೇಲೆ ಅಂತಿಮ ವರದಿ ಸಲ್ಲಿಸಲಾಗಿದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಸುಳ್ಳು ಎಂದು ನುಡಿಯುತ್ತಾರೆ. ಕೆ.ಎ.-32-ಇಡಿ-1617 ಅಪಘಾತ ಪಡಿಸಿದ ಈ ವಾಹನ ನಮ್ಮ ವಿಮೆಯ ಷರತ್ತುಗಳನ್ನು ಉಲ್ಲಂಘಿಸಿಲ್ಲಾ ಎಂದರೆ ಸರಿಯಲ್ಲ. ಅಪಘಾತ ಆದ ನಂತರ ಅಪಘಾತ ಪಡಿಸಿದ ವಾಹನಮಾಲಿಕ ನಮಗೆ ತಿಳಿಸಿಲ್ಲಾ ಅಂತಾ ಒಂದೇ ಕಾರಣಕ್ಕೆ ನಮ್ಮ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ವಾಹನ ಮಾಲಿಕ ನಮ್ಮ ಕಂಪನಿಗೆ ಬೇಕಾದ ಎಲ್ಲಾ ದಾಖಲೆಗಳನ್ನು ಕೊಟ್ಟಿದ್ದರು ಅವುಗಳನ್ನು ಮುಚ್ಚಿಟ್ಟು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಎಮ್ ವಿ ಸಿ ನಂಃ 1223/2024**

ಆರ್.ಡಬ್ಲ್ಯೂಃ 1,

ನಿಪಿ-2 ಮತ್ತು ಅಂತಿಮ ವರದಿ ಪ್ರಕಾರ ಅರ್ಜಿದಾರ ವಾಹನಕ್ಕೆ ಹಿಂದಿನಿಂದ ಬಂದು ಬೈಕ ಡಿಕ್ಕಿ ಪಡಿಸಿದೆ ಎಂದರೆ ಸರಿಯಲ್ಲ. ಇದು ಥರ್ಡ ಪಾರ್ಟಿ ಕ್ಲೇಮ್ ಇದೆ ಎಂದರೆ ಸಾಕ್ಷಿ ಸ್ವತ: ಬಿದ್ದಿದ್ದಾರೆ ಎಂದು ನುಡಿಯುತ್ತಾರೆ. ಅಪಘಾತ ಪಡಿಸಿದ ವಾಹನ ನಂಬರ ಕೆ.ಎ.-32-ಇಡಿ-1617 ವಿಮೆ ಇದೆ. ಅಂತಿಮ ವರದಿ ಪ್ರಕಾರ ಕೆ.ಎ.-32-ಇಡಿ-1617 ವಾಹನ ಕೆ.ಎ.-01-ಎಚ್ ಎಫ್ -5095 ವಾಹನ ಬಂದು ಹಿಂದಿನಿಂದ ಬಂದು ಡಿಕ್ಕಿ ಪಡಿಸಿದೆ ಎಂದರೆ ಸರಿಯಲ್ಲ . ಅರ್ಜಿದಾರ ವಾಹನಕ್ಕೆ ಹಿಂಬದಿಯಿಂದ ಬಂದು ಡಿಕ್ಕಿ ಪಡಿಸಿದ ಕಾರಣ ನಮ್ಮ ವಿಮೆ ಹೊಂದಿದ ವಾಹನವು ಥರ್ಡ ಪಾರ್ಟಿ ಕ್ಲೇಮ ಆಗುತ್ತದೆ ಎಂದರೆ ಸರಿಯಲ್ಲ. ಮೃತ ವ್ಯಕ್ತಿ ಅಪ್ರಾಪ್ತ ಇದ್ದು ಕೆ.ಎ.-01-ಎಚ್ ಎಫ್ -5095 ವಾಹನ ಚಲಾಯಿಸುತ್ತಿದ್ದ ಅಂತಾ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾವು ಖಾಸಗಿ ತನಿಖೆ ಮಾಡಿಲ್ಲಾ. ಅಂತಿಮ ವರದಿ ಪ್ರಕಾರ ಅರ್ಜಿದಾರರ ವಾಹನಕ್ಕೆ ಕೆ.ಎ.-32-ಇಡಿ-1617 ಮೇಲೆ ಸಲ್ಲಿಸಿದ್ದಾರೆ ಸರಿ. ಅಪಘಾತ ಪಡಿಸಿದ ವಾಹನಕ್ಕೆ ಚಾಲನಾ ಪತ್ರ ಮತ್ತು ವಿಮೆ ಇದೆ ಮತ್ತು ಎಲ್ಲಾ ದಾಖಲೆ ಇವೆ ಎಂದರೆ ಸರಿಯಲ್ಲ. ಪರಿಹಾರ ನೀಡಲು ನಾವು ಭಾಧ್ಯಸ್ಥರು ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**

**ಚಿತ್ತಾಪೂರ**